## ಕಾಡು ಸುವರ್ಣಗಡ್ಡೆ

ಸುವರ್ಣಗಡ್ಡೆಯನ್ನು ನೋಡಿರುತ್ತೇವೆ. ಆದರೆ ಕಾಡಿನ ಸುವರ್ಣಗಡ್ಡೆ, ಅದರ ಹಣ್ಣನ್ನು ನೋಡಿದವರು ಕಡಿಮೆ.

ಕಪ್ಪು ಬಣ್ಣದ ಕಾಂಡ ಹೊಂದಿರುವ ಕಾಡು ಸುವರ್ಣಗಡ್ಡೆಯ ಗಡ್ಡೆಹೂ ಬಿಟ್ಟ ಬಳಿಕ ಉದ್ದನೆಯ ದಂಡು ಕಾಣಿಸಿಕೊಳ್ಳುತ್ತದೆ. ನೆಲದಿಂದ ಎರಡುಮೂರು ಅಡಿ ಉದ್ದ ಇರುವ ಈ ದಂಡಿನಲ್ಲಿ ಹಳದಿ ಬಣ್ಣದ ಹಣ್ಣುಗಳು ಕಂಡುಬರುತ್ತವೆ. ಹೂವಿನಂತೆ ಕಾಣಿಸುವುದರಿಂದ ಹಣ್ಣು ಎಂದು ನಂಬುವುದು ಕಷ್ಟ. ಈ ಹಣ್ಣುಗಳನ್ನು ತಿನ್ನುವುದಿಲ್ಲ.

—ಅರುಣ್ ಕಿಲ್ಲೂರು





## ಕನಕದಾಸರ ಸಮಾಧಿ

ಕಾಗಿನೆಲೆ ಆದಿಕೇಶವನ ಅಂಕಿತನಾಮದಲ್ಲಿ ಕೀರ್ತನೆಗಳನ್ನು ರಚಿಸಿದ ಕನಕದಾಸರ ಕರ್ಮಭೂಮಿ ಬ್ಯಾಡಗಿ ತಾಲ್ಲೂಕಿನ ಕಾಗಿನೆಲೆ. ಕನಕದಾಸರು ನಾಲ್ಕುನೂರು ವರ್ಷಗಳ ಹಿಂದೆ ಕೀರ್ತನೆಗಳನ್ನು, ಭಾಮಿನಿ ಷಟ್ಪದಿಯಲ್ಲಿ ಕಾವ್ಯಗಳನ್ನು ರಚಿಸಿದರು. ಕನಕದಾಸರು ಆದಿಕೇಶವನ ಗುಡಿ ಹಾಗೂ ಲಕ್ಷ್ಮೀನರಸಿಂಹ ದೇವಾಲಯದಲ್ಲಿ ಹೆಚ್ಚಿನ ಸಮಯ ಕಳೆಯುತ್ತಿದ್ದರು. ಅವರು ಕಾಲವಾದ ಅನಂತರ ಕಾಗಿನೆಲೆಯ ಕೆರೆಯ ಪಕ್ಕದಲ್ಲಿ ಅವರ ಸಮಾಧಿ ಮಾಡಲಾಯಿತು. ಇತ್ತೀಚೆಗೆ ಆ ಸಮಾಧಿಯನ್ನು ಪುನರ್ನಿರ್ಮಿಸಿ ನವೀಕರಿಸಲಾಗಿದೆ. ಸಮಾಧಿಯ ಹಿಂದೆ ಅವರ ಮೂರ್ತಿಯೂ ಇದೆ.

—ಪ್ರಕಾಶ ಎಸ್. ಮನ್ನಂಗಿ, ಮೋಟೆಬೆನ್ನೂರು

## ಸುವರ್ಣ ಪುಷ್ಪ

ಉಡುಪಿಯ ಕವಿ ಮುದ್ದಣ ಮಾರ್ಗದಲ್ಲಿ ಇರುವ ಸದ್ಗುರು ನಿತ್ಯಾನಂದ ಮಂದಿರ ಮಠದಲ್ಲಿ, ಮಾರುಕಟ್ಟೆಯಿಂದ ಸುವರ್ಣಗಡ್ಡೆ ತಂದು, ಪಾಕಶಾಲೆಯಲ್ಲಿ ರಕ್ಷಿಸಿ ಇಡಲಾಗಿತ್ತು. ತಂದಿರುವ ಸುವರ್ಣಗಡ್ಡೆಯಲ್ಲಿ ಕೆಲವು ದಿನಗಳ ಬಳಿಕ ಅಂದದ ಹೂ ಅರಳಿ ನೋಡುಗರ ಗಮನ ಸೆಳೆಯಿತು.

—ತಾರಾನಾಥ್ ಮೇಸ್ತ, ಶಿರೂರು

